



# 'ವಿವೇಕ ಸ್ಮಾರಕ'ಕ್ಕೆ ಸ್ಥಳ ಹಸ್ತಾಂತರ

ಮೈಸೂರು ಶ್ರೀರಾಮಕೃಷ್ಣ ಆಶ್ರಮವು ನಿರ್ಮಿಸಲು ಉದ್ದೇಶಿಸಿರುವ **'ಸ್ವಾಮಿ ವಿವೇಕಾನಂದ ಯುವ ಸಾಂಸ್ಕೃತಿಕ ಕೇಂದ್ರ,'** ಅಥವಾ **'ವಿವೇಕ ಸ್ಮಾರಕ'**ಕ್ಕಾಗಿ ಸ್ವಾಮಿ ವಿವೇಕಾನಂದರು ಮೈಸೂರಿಗೆ ಭೇಟಿಯಿತ್ತಾಗ ತಂಗಿದ್ದ ನಿರಂಜನ ಮಠಕ್ಕೆ ಸಮೀಪದಲ್ಲಿರುವ ಎನ್.ಟಿ.ಎಂ. ಶಾಲೆಯನ್ನು ಫೆಬ್ರವರಿ ೫ ರಂದು ಆಶ್ರಮಕ್ಕೆ ಸರ್ಕಾರವು ಹಸ್ತಾಂತರಿಸಿದೆ. ಈ ಮೂಲದ ಸುಮಾರು ೮ ವರ್ಷಗಳಿಂದ ವಿವಿಧ ಗೊಂದಲಗಳಿಂದಾಗಿ ಉಂಟಾಗಿದ್ದ ಅಸ್ಥಿರತೆಯು ನಿವಾರಣೆಯಾಗಿ, ಈ 'ಸಾಂಸ್ಕೃತಿಕ ಕೇಂದ್ರ'ದ ನಿರ್ಮಾಣಕ್ಕೆ ಹಾದಿ ಸುಗಮವಾಗಿದೆ. ಮೈಸೂರು ಜಿಲ್ಲಾಧಿಕಾರಿಗಳಾದ ಶ್ರೀ ಬಗಾದಿ ಗೌತಮ್ ಅವರು ಅಧಿಕೃತವಾಗಿ ಶಾಲೆಯನ್ನು ಹಸ್ತಾಂತರಿಸಿದರು.

ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರೂ ಚೆನ್ನೈ ರಾಮಕೃಷ್ಣ ಮಠದ ಅಧ್ಯಕ್ಷರೂ ಆದ ಶ್ರೀಮತ್ ಸ್ವಾಮಿ ಗೌತಮಾನಂದಜಿ ಮಹಾರಾಜ್ ಅವರು ಇತ್ತೀಚೆಗೆ ಮೈಸೂರು ಆಶ್ರಮಕ್ಕೆ ಭೇಟಿಯಿತ್ತ ಸಂದರ್ಭದಲ್ಲಿ, ದಿನಾಂಕ ೨೫ರಂದು ಉದ್ದೇಶಿತ 'ವಿವೇಕ ಸ್ಮಾರಕ' ಯೋಜನೆಗೆ ಶುಭಾರಂಭ ಮಾಡುವ ನಿಟ್ಟಿನಲ್ಲಿ ದಿವ್ಯತ್ರಯರ ಭಾವಚಿತ್ರಕ್ಕೆ ಆರತಿ ಬೆಳಗಿ ಪೂಜೆ ಸಲ್ಲಿಸಿದರು.

''ಮೈಸೂರು ಒಂದಲ್ಲ ಒಂದು ದಿನ ನಮ್ಮ ಸಂಸ್ಥೆಯ ಒಂದು ದೊಡ್ಡ ಪ್ರಬಲವಾದ ಸ್ಥಾನವಾಗುವುದು'' ಎಂದು ಸ್ವಾಮೀಜಿ ಪತ್ರವೊಂದರಲ್ಲಿ ಬರೆದಿದ್ದರು. ಅವರ ಹಾರೈಕೆ ಸಾಕಾರಗೊಳ್ಳುವಂತೆ ಭವ್ಯ ಕೇಂದ್ರವೊಂದರ ನಿರ್ಮಾಣ ಮಾಡಲು ಯೋಗ್ಯವಾದ ಬೃಹತ್ ಕಟ್ಟಡವೊಂದರ ಯೋಜನೆ ಈಗಲೇ ತಯಾರಾಗಿದ್ದು, ಮುಂದೆ ಇಲ್ಲಿ ಸೀಮಿತ ಅವಧಿಯ ಕೋರ್ಸ್‌ಗಳು, ವ್ಯಕ್ತಿತ್ವ ವಿಕಸನ ಹಾಗೂ ಆಧ್ಯಾತ್ಮಿಕ ಶಿಬಿರಗಳು, ಗ್ರಂಥಾಲಯ, ತರಬೇತಿ ಶಿಬಿರಗಳು, ಯೋಗ, ಭಾರತೀಯ ಸಂಗೀತ ತರಗತಿಗಳು, ಕೌಶಲ್ಯ ಬೆಳವಣಿಗೆ ಹಾಗೂ ಉದ್ಯೋಗಾಭಿವೃದ್ಧಿಯ ಕೋರ್ಸ್‌ಗಳು, ಇಂಗ್ಲಿಷ್ ಹಾಗೂ ಕನ್ನಡ ಸಂಭಾಷಣ ಶಿಬಿರಗಳು – ಇವುಗಳನ್ನು ಆರಂಭಿಸಲಾಗುವುದು. ಈ ಕೇಂದ್ರದ ನಿರ್ಮಾಣದಿಂದಾಗಿ ಸ್ವಾಮಿ ವಿವೇಕಾನಂದರ ಹಾಗೂ ಮೈಸೂರು ನಗರದ ಐತಿಹಾಸಿಕ ನಂಟು ಮತ್ತಷ್ಟು ಉಜ್ಜ್ವಲವಾಗಿ ಬೆಳಗುವುದೆಂದು ನಾವು ನಿರೀಕ್ಷಿಸಬಹುದಾಗಿದೆ.

# ಸ್ವಾಮಿ ವಿವೇಕಾನಂದರ ಶ್ರೀಲಂಕಾ ಭೇಟಿಯ ೧೨೫ನೇ ವಾರ್ಷಿಕೋತ್ಸವ



ಸ್ವಾಮಿ ವಿವೇಕಾನಂದರು ಪಶ್ಚಿಮ ದೇಶಗಳಿಂದ ಮರಳಿದಾಗ ಮೊತ್ತಮೊದಲು ಶ್ರೀಲಂಕಾದಲ್ಲಿ ಬಂದಿಳಿದಿದ್ದರು. ಈ ಐತಿಹಾಸಿಕ ಘಟನೆಯು ನಡೆದು ೧೨೫ ವರ್ಷಗಳಾಗಿರುವ ಹಿನ್ನೆಲೆಯಲ್ಲಿ, ಶ್ರೀಲಂಕಾದ ಕೊಲಂಬೋ ಆಶ್ರಮವು ವಿವಿಧ ಕಾರ್ಯಕ್ರಮಗಳೊಂದಿಗೆ ಸ್ವಾಮೀಜಿ ಭೇಟಿಯ ೧೨೫ನೇ ವಾರ್ಷಿಕೋತ್ಸವವನ್ನು ಆಚರಿಸಿತು. ಭಾರತಕ್ಕೆ ಮರಳುವ ಮುನ್ನ ಸ್ವಾಮೀಜಿಯವರು ನೆಲೆಸಿದ್ದ ಕೊಲಂಬೋ, ಕ್ಯಾಂಡಿ, ವವುನಿಯಾ, ಜಾಫ್ನಾ ನಗರಗಳಲ್ಲಿ ಈ ಕಾರ್ಯಕ್ರಮಗಳು ನಡೆದವು. ಬಟ್ಟಿಕಲೋವ ಜಿಲ್ಲೆಯ ಮಂಡೂರು ಪಟ್ಟಣದಲ್ಲಿ ೨೦೨೨ರ ಮಾರ್ಚ್ ೨೦ರಂದು ನಡೆದ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ರಥದ ಮೆರವಣಿಗೆ, ಪ್ರವಚನ ಹಾಗೂ ಇತರ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಈ ಸಂದರ್ಭದಲ್ಲಿ ಪ್ರವಾಸಿ ಕೇಂದ್ರವಾದ ಮಂಡೂರು ಪಟ್ಟಣದಲ್ಲಿ ಶ್ರೀರಾಮಕೃಷ್ಣರ ದೇವಾಲಯವನ್ನು ಉದ್ಘಾಟಿಸಲಾಯಿತು. ಶ್ರೀಲಂಕಾದ ಪೂರ್ವ ಪ್ರಾಂತ್ಯದ ರಾಜ್ಯಪಾಲರು ಫೆಬ್ರವರಿ ೨೧ ರಂದು ಕೊಲಂಬೋ ಆಶ್ರಮದ ಉಪಕೇಂದ್ರವಾಗಿರುವ ಬಟ್ಟಿಕಲೋವ ಕೇಂದ್ರಕ್ಕೆ ಅತ್ಯುತ್ತಮ ಉದ್ಯಾನ ನಿರ್ಮಾಣಕ್ಕಾಗಿ ಪ್ರಶಸ್ತಿ ನೀಡಿದರು.

Managing Editor : Swami Muktidananda Editor : Swami Jnanayogananda

Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020